## ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,

## ಸುಳ್ಯ, ದ.ಕ.

## ಸಿಸಿ ನಂಬ್ರ **764/2025**

**ಫಿರ್ಯಾದಿದಾರರು** : **ಸರಕಾರದ ಪರ ಅಬಕಾರಿ ನಿರೀಕ್ಷಕರು**
**ಸುಳ್ಯ ವಲಯ ಸುಳ್ಯ, ದ.ಕ.**

**-ವಿರುದ್ಧ –**

**ಆರೋಪಿತ** : ವಿದ್ಯಾ ಕೋಂ ಅಶೋಕ,
ಪ್ರಾಯಃ 47 ವರ್ಷ ವಾಸಃ ಕಾರ್ಯತಡ್ಕ ಮನೆ,
ಮುರುಳ್ಯ ಗ್ರಾಮ ಮತ್ತು ಅಂಚೆ,
ಸುಳ್ಯ ತಾಲೂಕು, ದ.ಕ.

### :: **ದೋಷಾರೋಪಣೆ** ::

ಚಿರಾಗ್ ಸಿ, ಬಿ.ಇ, ಎಲ್.ಎಲ್.ಬಿ ., ಸಿ.ಜೆ ಮತ್ತು ಜೆ.ಎಂ.ಎಫ್.ಸಿ ., ಸುಳ್ಯ ಆದ ನಾನು ಮೇಲ್ಕಂಡ ಆಪಾದಿತರಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪಗಳನ್ನು ಹೊರಿಸುತ್ತಿದ್ದೇನೆ .

ಆರೋಪಿಯಾದ ನೀವು, **2023** ರ ಸಾರ್ವತ್ರಿಕ ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಸಮಯದಲ್ಲಿ ಅಬಕಾರಿ ಉಪ ಅಧೀಕ್ಷಕರು ಸಿಬ್ಬಂದಿಯವರೊಂದಿಗೆ ಸರ್ಕಾರಿ ವಾಹನ ಸಂಖ್ಯೆ:ಕೆಎ-**19**-ಜಿ-**0962** ರಲ್ಲಿ ಸುಳ್ಯ ತಾಲೂಕು ನಿಂತಿಕಲ್ಲಿನಲ್ಲಿ ಗಸ್ತು ನಡೆಸುತ್ತಿದ್ದ ಸಮಯದಲ್ಲಿ ಅಬಕಾರಿ ನಿರೀಕ್ಷಕರಿಗೆ ಅಕ್ರಮವಾಗಿ ಮದ್ಯವನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾರೆಂದು ದೊರೆತ ಖಚಿತ ನೀವು ವಾಸವಿರುವ ನಿಮ್ಮ ಮನೆಯ ಮುಂಭಾಗದ ವರಾಂಡದ ಬಲಬದಿಯಲ್ಲಿದ್ದ ಸೋಫಾದ ಮೇಲೆ ಪಾಲಿಥೀನ್ ಚೀಲ ಇರುವುದು ಕಂಡು ಬಂದಿದ್ದು ತೆರೆದು ನೋಡಲಾಗಿ **180** ಮಿಲಿಯ ಮೈಸೂರು ಲ್ಯಾನ್ಸರ್ ವಿಸ್ಕಿಯ-**32** ಟೆಟ್ರಾ ಪ್ಯಾಕ್ ಗಳಲ್ಲಿ ಒಟ್ಟು **5.760** ಲೀ ಇರುವುದು ಪತ್ತೆಯಾಗಿದ್ದು, ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಹೊಂದಿದ್ದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ **1965**

ರ ಕಲಂ **14, 15, 32, 38**(ಎ) ಹಾಗೂ ಕಲಂ **43** ರಡಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರ.**1** : ನೀಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ **?** ಅದು ನಿಮಗೆ ತಿಳಿಯಿತೇ**?**

ಉತ್ತರ :

ಪ್ರ.**2** : ನೀವು ಸದರಿ ಆಪಾದನೆಯನ್ನು ಒಪ್ಪಿಕೊಳುತ್ತೀರಾ **?** ಅಥವಾ ನಿಮ್ಮ ವಿರುದ್ದ ವಿಚಾರಣೆ ನಡೆಯಬೇಕೆ **?**

ಉತ್ತರ :

ಮೇಲ್ಕಂಡ ಆರೋಪದ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : **08.07.2026**
ಸ್ಥಳ : ಸುಳ್ಯ

ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಸುಳ್ಯ, ದ.ಕ.